Crl. Misc. 86/2022

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 12.06.2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ.ಕೆ ಎನ್ ಎಸ್ ರವರಿಂದಃ

ನನ್ನ ಮದುವೆ ನನ್ನ ತಂದೆಯ ಖರ್ಚಿನಲ್ಲಿ ಆಗಿದೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಇಲ್ಲಿಂದಲ್ಲೇ ಮದುವೆ ಮಾಡಿಕೊಂಡು ಹೋಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಮಾಣಿ ಮಠದಲ್ಲಿರುವ ಕಲ್ಯಾಣ ಮಂಟಪದ ಶುಲ್ಕವನ್ನು ಯಾರು ಪಾವತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ , ಅದು ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಮದುವೆಯಾದ ನಂತರ ಎದುರುದಾರರ ಮನೆಗೆ ವೈವಾಹಿಕ ಜೀವನವನ್ನು ನಡೆಸಲು ದಿನಾಂಕಃ 29.04.2018 ರಂದು ಹೋಗಿರುತ್ತೇನೆ. ಎದುರುದಾರನ ಮನೆ ಪುತ್ತೂರು ತಾಲ್ಲೂಕಿನ ಮಂಡೂರು ಗ್ರಾಮದ ಪುತ್ತಿಲದಲ್ಲಿ ಇರುತ್ತದೆ. ನನ್ನ ಮದುವೆಯ ಬಗ್ಗೆ ಪ್ರಸ್ತಾಪವನ್ನು ಮಠದವರು ಮಾಡಿರುತ್ತಾರೆ. ಎದುರುದಾರನ ಪೂರ್ವಾಪರದ ಬಗ್ಗೆ ನಾನು ವಿಚಾರಣೆ ಮಾಡಿರುತ್ತೇನೆ. ಎದುರುದಾರನಿಗೆ ನನ್ನ ಆರೋಗ್ಯದ ಬಗ್ಗೆ ಮಾಹಿತಿಯನ್ನು ತಿಳಿಸಿರುತ್ತೇನೆ. ಸಾಮಾನ್ಯವಾಗಿ ಇರುವ ಕಾಯಿಲೆಗಳ ಮಾಹಿತಿಯನ್ನು ನೀಡಿರುತ್ತೇನೆ, ನನಗೆ ಬೇರೆ ಯಾವುದೇ ಆರೋಗ್ಯದ ಸಮಸ್ಯೆಗಳು ಇರುವುದಿಲ್ಲ ಎಂದು ಹೇಳಿದ್ದೆ, ಈಗಲೂ ಸಹ ನನಗೆ ಆರೋಗ್ಯದ ಸಮಸ್ಯೆಗಳು ಇರುವುದಿಲ್ಲ. ನಾನು ವಿವಾಹದ ಪೂರ್ವದಲ್ಲಿ ಯಾವುದೇ ಚಿಕಿತ್ಸೆ ಯನ್ನು ಪಡೆದಿರುವುದಿಲ್ಲ. ಆದರೆ ಹೆಣ್ಣುಮಕ್ಕಳಿಗೆ ಇರುವ ಸಾಮಾನ್ಯ ಕಾಯಿಲೆಯ ಬಗ್ಗೆ ಮಾತ್ರ ಚಿಕಿತ್ಸೆ ಪಡೆದಿದರುತ್ತೇನೆ. ಆದರೆ ನನಗೆ ತಲೆನೋವು ಇರುತ್ತದೆ. ನಾನು ಶಿವಮೊಗ್ಗದ ಶ್ರೀಧರ ನರ್ಸಿಂಗ್ ಹೋಮ್ ನಲ್ಲಿ ತಲೆನೋವಿಗೆ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಚಿಕಿತ್ಸೆ ಪಡೆದ ಬಗ್ಗೆ ಪ್ರಿಸ್ಕ್ರಿಪ್ಷ್ನ್ ನನ್ನ ಬಳಿ ಇರುವುದಿಲ್ಲ. ಸಾಕ್ಷಿಯು ಪ್ರಿಸ್ಕ್ರಿಷ್ಷನ್ ದಾಖಲೆಗಳನ್ನು ತೋರಿಸಲಾಗಿದ್ದು, ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಎದುರುದಾರರ ಪರವಾಗಿ ನಿಡಿ 1 ಎಂದು ಗುರುತಿಸಲಾಯಿತು. ನಾಗರಾಜ್ ನ್ಯೂರೋ ಕ್ಲಿನಿಕ್ ನಲ್ಲಿಯು ಸಹ ಚಿಕಿತ್ಸೆಪಡೆದಿರುತ್ತೇನೆ. ಅ ಬಗ್ಗೆಪ್ರಿಸ್ಕ್ರಿಪ್ಷ್ನ್ ಅನ್ನು ನೋಡಿ ಗುರುತಿಸಿದ್ದು ನಿಡಿ 2

ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದ್ದು ಅದರಲ್ಲಿ ತನ್ನ ಮತ್ತು ಎದುರುದಾರನ ಚಿತ್ರ ಇರುವ ಬಗ್ಗೆ ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನು ಕೆಲವು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 4 ರಿಂದ 7 ಎಂದು ಗುರುತಿಸಲಾಯಿತು. ದಿನಾಂಕಃ 31.08.2019 ರಂದು ನಾನು ಮಂಗಳೂರಿನ ಮನಃಶಾಂತಿ ಕೇಂದ್ರಕ್ಕೆ ಹೋಗಿರುವ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿಯು ಈಗ ತೋರಿಸಿರುವ ಕಾಣಿಸುತ್ತಿರುವ ಹೆಸರು ತನ್ನ ಮಾವನ ಹೆಸರು ಎಂದು ಹೇಳಿದ್ದು, ಆದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಸೀಮಂತ ಕಾರ್ಯ ಸಾಗರದ ಶ್ರೀ ರಾಘವೇಶ್ವರ ಸಮುದಾಯು ಭವನದಲ್ಲಿ ಆಗಿರುತ್ತದೆ, ಸಾಕ್ಷಿಗೆ ಒಂದು ರಶೀದಿಯನ್ನು ತೋರಿಸಲಾಗಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ.

ನನ್ನ ಗಂಡನ ತಾಯಿ ವಿದ್ಯಾಸರಸ್ವತಿಯವರು ಪುತ್ತೂರಿನ ಮಹಿಳಾ ಪೋಲಿಸ್ ಠಾಣೆ ದೂರು ಕೊಟ್ಟಿರುತ್ತಾರೆಂದರೆ ಸರಿ. ನಾನು ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿಯೇ ನನ್ನ ಅತ್ತೆ ಪೋಲಿಸ್ ಠಾಣೆಗೆ ದೂರು ಕೊಟ್ಟಿರುತ್ತೇರೆಂದರೆ ಸರಿ. ಎದುರುದಾರ ನನ್ನ ಮೇಲೆ ಹಲ್ಲೆ ಮಾಡಿದ್ದ ಎಂದು ನನ್ನ ಅರ್ಜಿಯಲ್ಲಿ ಹೇಳಿದ್ದು, ಆ ಬಗ್ಗೆ ನಾನು ಎದುರುದಾರನ ವಿರುದ್ಧ ದೂರನ್ನು ಕೊಟ್ಟಿರುವುದಿಲ್ಲ ಹಾಗೂ ಚಿಕಿತ್ಸೆಯನ್ನು ಪಡೆದಿರುವುದಿಲ್ಲ ಕಾರಣ ನನ್ನನ್ನು ಮನೆಯಿಂದ ಹೊರಗಡೆ ಹೋಗಲು ಬಿಡುತ್ತಿರಲಿಲ್ಲ. ಎದುರುದಾರ ನನ್ನ ಮೇಲೆ ಹಲ್ಲೆ ಮಾಡಿರುವ ಬಗ್ಗೆ ನನ್ನ ಬಳಿ ಪೋಟೋಗಳು ಇರುತ್ತವೆ. ಎದುರುದಾರ ಹಲ್ಲೆ ಮಾಡಿದ್ದರಿಂದ ನಾನು ಅವನ ಮನೆಯನ್ನು ಬಿಟ್ಟು ಬಂದಿರುವುದಿಲ್ಲ. ನಾನು ಕೊನೆಯ ಬಾರಿಗೆ ಎದುರುದಾರನ ಮನೆಯನ್ನು ದಿನಾಂಕ 9 ಅಥವಾ 10 ಮಾರ್ಚ್, 2022 ಆಗಿರುತ್ತದೆ. ಸಾಕ್ಷಿಯು ನನಗೆ ವರ್ಷ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ಎದುರುದಾರನೇ ನನ್ನನ್ನು ನನ್ನ ತಂದೆಯ ಮನೆಗೆ ತಂದು ಬಿಟ್ಟು ಹೋಗಿರುತ್ತೇನೆ. ನಾನು ತವರು ಮನೆಗೆ ಹೋಗುದಾಗಿ ಹೇಳಿದ್ದರಿಂದ ನನ್ನನ್ನು ತಂದು ಬಿಟ್ಟಿರುತ್ತಾರೆ. ನಾನು ತವರು ಮನೆಗೆ ಬಂದಾಗಲೂ ಸಹ ಎದುರುದಾರನ ವಿರುದ್ದ ಹಲ್ಲೇ ಮಾಡಿದ ಬಗ್ಗೆ ದೂರನ್ನು ಕೊಟ್ಟಿರುವುದಿಲ್ಲ ಕಾರಣ ನಾನು ಎದುರುದಾರನ ಮನೆಗೆ ಹೋಗುವ ಆಸೆ ಇತ್ತು. ಎದುರುದಾರ ಆಗಾಗ ನನಗೆ ದೈಹಿಕ ಹಲ್ಲೆ ಮಾಡುತ್ತಿದ್ದ ಆದ್ದರಿಂದ ಚಿಕಿತ್ಸೆ ಪಡೆಯುವಷ್ಟು ದೊಡ್ಡ ಗಾಯ ಆಗಿರುವುದಿಲ್ಲ.

ನನ್ನ ಮತ್ತು ನನ್ನ ಗಂಡನ ಮಧ್ಯೆ ಉಂಟಾಗಿರುವ ಕಲಹದ ಬಗ್ಗೆ ಹಿರಿಯರ ಸಮಕ್ಷಮ ರಾಜಿ ಪಂಚಾಯಿತಿ ಆಗಿರುತ್ತದೆ. ಸಾಕ್ಷಿ ಸಮಾರು ಎಂಟು- ಹತ್ತು ಬಾರಿ ರಾಜಿ ಪಂಚಾಯಿತಿ

ಆಗಿರುತ್ತದೆ ಆದರೆ ನನಗೆ ದಿನಾಂಕ ನೆನಪಿಲ್ಲ. ಅದೇರೀತಿ ಎಲ್ಲಿ ರಾಜಿ ಪಂಚಾಯಿತಿ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಎಂ ಜಿ ರಾಮಣ್ಣ, ರಾಧಾಕೃಷ್ಣನ್, ಮುರಳಿ, ದಯಾನಂದ, ನನ್ನ ತಂದೆ ತಾಯಿ, ಈಶ್ವರಿ, ರಾಮಕೃಷ್ಣ ಭಟ್ ,ಎದುರುದಾರರನ ತಂದೆ ತಾಯಿ ಹಾಜರಿದ್ದರು. ಸದರಿ ಪಂಚಾಯಿತಿಗೆ ಗೋಕರ್ಣದ ಅಶೋಕ್.ಕೆ. ಸಹ ಹಾಜರಿದ್ದರು. ದಿನಾಂಕಃ 07.03.2021 ಕ್ಕೆ ರಾಜಿ ಪಂಚಾಯಿತಿ ಆಗಿರುತ್ತದೆ ಎಂದರೆ ನನಗೆ ನಿಖರವಾದ ದಿನಾಂಕ ನೆನಪಿಲ್ಲ. ಎದುರುದಾರನ ಮನೆಯಲ್ಲಿ ಆಗಿರುವ ರಾಜಿ ಪಂಚಾಯಿತಿಯಲ್ಲಿ ಎಂ.ಜಿ. ರಾಮಚಂದ್ರ, ಉಮಾಮಹೇಶ್ವರಿ ಪಿ ಆರ್ ಮತ್ತು ಬಿ ಎಂ ಸುಬ್ಬರಾಯ್ , ಶಿವಮೊಗ್ಗದ ಸುಬ್ಬರಾಯ್ ಹಾಜರಿದ್ದರು. ನಾನು ಮನೆ ಬಿಟ್ಟು ಬರುವ 3 -4 ದಿವಸ ಮುಂಚೆ ಇನ್ನೊಂದು ಸಲ ರಾಜಿ ಪಂಚಾಯಿತಿ ಆಗಿರುತ್ತದೆ. ಸದರಿ ಪಂಚಾಯಿತಿಯಲ್ಲಿ ಪ್ರಶಾಂತ್ ಸೊರಬ, ಹಿರಯಣ್ಣ ಎನ್ ಎಂ, ನನ್ನ ತಂದೆ ತಾಯಿ, ಗೋಪಾಲ ಕೃಷ್ಣ ಜೋಯಿಸ್, ಈಶ್ವರಿ ರಾಮಕೃಷ್ಣ ಭಟ್ ರವರು ಹಾಜುರು ಇದ್ದರು ಎಂದರೆ ಸರಿ. ತೀರ್ಥಹಳ್ಳಿಯಲ್ಲಿ ದಿನಾಂಕಃ 28.08.2022 ರಂದು ಕೊನೆಯ ರಾಜಿ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿ. ಸದರಿ ರಾಜಿ ಪಂಚಾಯಿತಿಯಲ್ಲಿ ಯಾವುದೇ ತೀರ್ಮಾನ ಆಗಿರುವುದಿಲ್ಲ. ರಾಜಿ ಪಂಚಾಯಿತಿಯಲ್ಲಿ ನಮ್ಮ ಪರವಾಗಿ ಭಾಗವಹಿಸಿದ ಹಿರಿಯರನ್ನು ನ್ಯಾಯಾಲಯಕ್ಕೆ ಕರೆದು ಸಾಕ್ಷಿ ಮಾಡಿಸುವ ಬಗ್ಗೆ ನನ್ನ ವಕೀಲರನ್ನು ಕೇಳಿ ಹೇಳುತ್ತೇನೆ . ಅವರನ್ನು ವಿಚಾರಣೆ ಮಾಡಲು ನನ್ನ ಆಕ್ಷೇಪಣೆ ಇರುವುದಿಲ್ಲ.

ನನ್ನ ಗಂಡ ತಂದೆ ತಾಯಿಯವರ ಜೊತೆ ಅವರ ಮನೆಯಲ್ಲಿಯೇ ವಾಸವಿರುವ ವಿಚಾರ ಮದುವೆಯಾಗುವ ಪೂರ್ವದಲ್ಲಿಯೇ ಗೊತ್ತಿತ್ತು. ನಾನು ಈಗ ನನ್ನ ತಂದೆತಾಯಿಯ ಜೊತೆ ವಾಸಮಾಡುತ್ತಿಲ್ಲ ಹಾಗೂ ಪ್ರತ್ಯೇಕವಾಗಿ ವಾಸಮಾಡುತ್ತಿದ್ದೇನೆ. ನನ್ನ ತಂದೆತಾಯಿಯ ಹಣಕಾಸಿನ ಸ್ಥಿತಿ ಚೆನ್ನಾಗಿರುವುದಿಲ್ಲ ಹಾಗೂ ನನ್ನ ಸಹೋದರ ಗರ್ಭಿಣಿಯಾಗಿರುವುದರಿಂದ ನಾನು ಅವರ ಜೊತೆ ವಾಸ ಮಾಡುತ್ತಿಲ್ಲ. ನಾನು ಯಾವ ಕಾರಣದಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆಂದು ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ನನ್ನ ತಂದೆ ತಾಯಿ ಜೊತೆ ಇರಲು ನನಗೆ ಕಿರಿಕಿರಿ ಆಗುತ್ತಿದೆ ಎಂದು ನನ್ನ ವಕೀಲರಿಗೆ ಹೇಳಿರುತ್ತೇನೆ. ನಾನು ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವುದರಿಂದ ನನ್ನ ತಂದೆ ತಾಯಿಯ ಜೊತೆ ಜಗಳ ಮಾಡಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆಂದರೆ ಸರಿಯಲ್ಲ, ನಾನು ಜಗಳ ಮಾಡುವ ಪ್ರವೃತ್ತಿಯನ್ನು ರೂಢಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಡಿ 1 ರಲ್ಲಿ ವೈದ್ಯರು ನನಗೆ ಯಾವ ಕಾಯಿಲೆ ಇದೆ ಎಂದು ಅದರಲ್ಲಿ ಬರೆದಿರುತ್ತಾರೆ ಎಂದು ನಾನು ತಿಳಿದು ಕೊಂಡಿಲ್ಲ. ನನಗೆ ತಲೆನೋವು ಮತ್ತು ಸಿಟ್ಟು ಬರುತ್ತದೆ ಎಂದು ಅವರ ಬಳಿ ಚಿಕಿತ್ಸೆ ಪಡೆಯಲು ಹೋಗಿದ್ದೆ. ಸದರಿ ದಾಖಲೆಯಲ್ಲಿ

ನಾನು ಸಿಡುಕು ಸ್ವಭಾವದವಳಾಗಿದ್ದು ನನ್ನ ತಂದೆತಾಯಿಯ ಜೊತೆ ಗಲಾಟೆ ಮಾಡುತ್ತೇನೆಂದು ಮತ್ತು ನಾನು ಪ್ರತ್ಯೇಕವಾಗಿ ವಾಸ ಮಾಡಲು ಇಷ್ಟ ಪಡುತ್ತೆನೆಂದು ಅರದಲ್ಲಿ ನಮೂದು ಇದೆ ಎಂದರೆ ನನಗೆ ನೆನಪಿಲ್ಲ. ನಾನು ಅ ಸಮಯದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ , ಸಾಕ್ಷಿಯು ಮುಂದುವರೆದು ನಾನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ನನ್ನ ತಂದೆ ತಾಯಿಯ ಜೊತೆ ವಾಸವಿರದೇ ಪ್ರತ್ಯೇಕವಾಗಿ ವಾಸ ಮಾಡುವ ಇಂಗೀತವನ್ನು ವ್ಯಕ್ತಪಡಿಸಿದ್ದೆ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ಕೊಡಿಸಲು ನನ್ನ ಜೊತೆ ನನ್ನ ತಂದೆ ಬರುತ್ತಿದ್ದರು. ನಿಡಿ 1 ರಲ್ಲಿ ಕಾಯಿಲೆಯ ವಿಚಾರವನ್ನು ನಾನು ಎದುರುದಾರನಿಗೆ ಮತ್ತು ಅವರ ಕುಟುಂಬದವರಿಗೆ ಹೇಳಿರುವುದಿಲ್ಲ. ನಿಡಿ 1 ಮತ್ತು 2 ರಲ್ಲಿ ಬರೆದಿರುವ ಮಾಹಿತಿಯ ಬಗ್ಗೆ ನನ್ನ ತಂದೆತಾಯಿ ಮತ್ತು ಚಿಕಿತ್ಸೆ ನೀಡಿರುವ ವೈದ್ಯರನ್ನು ವಿಚಾರಣೆ ಮಾಡಲು ನನಗೆ ತೊಂದರೆ ಇರುವುದಿಲ್ಲ. ನಿಡಿ 1 ರಂತೆ ಚಿಕಿತ್ಸೆ ಪಡೆಯಲು ಹೋದಾಗ ನನಗೆ ಅತಿಯಾದ ನಿದ್ರೆ ಮತ್ತು ಕೆಲಸದಲ್ಲಿ ಅಸಕ್ತಿ ಇಲ್ಲದೇ ಇರುವ ಬಗ್ಗೆ ವೈದ್ಯರಿಗೆ ತಿಳಿಸಿರುವುದಿಲ್ಲ. ಸಾಕ್ಷಿ ಯು ಮುಂದುವರೆದು ನಾನು ಚಿಕಿತ್ಸೆ ಪಡೆದ ನಂತರ ಮಾತ್ರೆಗಳನ್ನು ಸೇವಿಸಿದಾಗ ಆತಿಯಾದ ನಿದ್ರೆ ಮತ್ತು ಕೆಲಸದಲ್ಲಿ ಅಸಕ್ತಿ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ಪ್ರತಿ ದಿವಸ 6 ಗಂಟೆ ಕೆಲಸ ಮಾಡಲೇ ಬೇಕೆಂದು ವೈದ್ಯರು ಸಲಹೆ ನೀಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

ನನ್ನ ಗಂಡನ ಹೆಸರಲ್ಲಿ ಯಾವುದೇ ಸ್ವಂತ ಮನೆ ಮತ್ತು ಜಮೀನುಗಳು ಇರುವುದಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ಎಷ್ಟು ಆದಾಯ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಎಷ್ಟು ಆದಾಯ ಇದೆ ಎಂದು ಈ ಅರ್ಜಿಯನ್ನು ತಯಾರಿಸುವ ಸಂದರ್ಭದಲ್ಲಿ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಎದುರುದಾರ ತನ್ನ ಆದಾಯ ಬಗ್ಗೆ ತನ್ನ ತಕರಾರಿನಲ್ಲಿ ಏನು ಹೇಳಿ ಬರೆಸಿರುತ್ತಾನೆಂದು ನಾನು ಕೇಳಿ ತಿಳಿದುಕೊಂಡಿಲ್ಲ. ನನ್ನ ಮಗುವಿಗೆ 2 ವರ್ಷ 2 ತಿಂಗಳು ವಯಸ್ಸು. ನನ್ನ ಮಗವನ್ನು ನನ್ನ ಗಂಡ ಭೇಟಿ ಯಾಗಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಅತ್ತೆ ಮಾವನಿಗೆ ನನ್ನ ಮಗವಿನ ಬಗ್ಗೆ ತುಂಬಾ ಪ್ರೀತಿ ಇದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಹೆರಿಗೆಗೆಂದು ಯಾವ ದಿನಾಂಕದಂದು ತವರು ಮನಗೆ ಬಂದಿದ್ದೆ ನನಗೆ ಹೇಳಲು ಗೊತ್ತಾಗುತ್ತಿಲ್ಲ. ನಾನು ಮೊದಲನೇ ಹೆರಿಗೆಗೆ ತವರು ಮನೆಗೆ ಬಂದಿರುತ್ತೇನೆ. ತವರು ಮನೆಗೆ ಎದುರುದಾರನೇ ಕರೆದುಕೊಂಡು ಹೋಗಿರುತ್ತಾನೆ. ಸೀಮಂತಕ್ಕೆ ಎದುರುದಾರ ಬಂದಿದ್ದರು.

ಸಾಕ್ಷಿ ಮುಂದುವರೆದು ಪಂಚಾಯಿತಿದಾರರ ಒತ್ತಾಯದ ಮೇರೆಗೆ ಬಂದಿದ್ದರು ಎಂದು ಉತ್ತರಿಸಿರುತ್ತಾರೆ. ಹೆರಿಗೆಯಾದ 3 ತಿಂಗಳವರೆಗೆ ನನ್ನ ತವರು ಮನೆಯಲ್ಲಿ ಇದ್ದೆ. ನನ್ನ ಹೆರಿಗೆಯಾಗಿ ನನ್ನ ಮಗವನ್ನು ನೋಡಿಕೊಳ್ಳಲು ಎದುರುದಾರರ ಬರುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೆರಿಗೆಯ ದಿನ ಮತ್ತು ನಾಮಕರಣದ ದಿನ ಮಾತ್ರ ಬಂದಿದ್ದ ಎಂದು ಉತ್ತರಿಸಿರುತ್ತಾರೆ . ನನ್ನ ಹೆರಿಗೆ ಯು ಸಾಗರದ ಸರ್ಕಾರಿ ಆಸ್ಪತ್ರೆಯಲ್ಲಿ ಆಗಿರುತ್ತದೆ. ಆ ದಿವಸ ನನ್ನ ಗಂಡ ಮತ್ತು ಅತ್ತೆ ಬಂದಿದ್ದರು. ನಾಮಕರಣಕ್ಕೆ ನನ್ನ ಗಂಡ, ಅತ್ತೆ ಮಾವ ಬಂದಿದ್ದರು. ಪುರೋಹಿತರು ಬಂದಿದ್ದರು. ಸದರಿ ಪುರೋಹಿತರನ್ನು ಎದುರುದಾರ ಕರೆದುಕೊಂಡು ಬಂದಿದ್ದ. ನಿಡಿ 3 ಅನ್ನು ನಾಮಕರಣದ ಸಂದರ್ಭದಲ್ಲಿ ತೆಗೆದಂತಹ ಪೋಟೋ ಆಗಿರುತ್ತದೆ. ನಿಡಿ 4 ಅನ್ನು ಸೀಮಂತ ಸಂದರ್ಭದಲ್ಲಿ ತೆಗೆದಂತಹ ಪೋಟೋ ಆಗಿರುತ್ತದೆ. ನಿಡಿ 6 ನನ್ನ ಗಂಡ ನನ್ನನ್ನು ತವರು ಮನೆಗೆ ತಂದುಬಿಟ್ಟಾಗ ತೆಗೆದಂತಹ ಪೋಟೋ ಆಗಿರುತ್ತದೆ. ದಿನಾಂಕಃ 09.03.2022 ರಂದು ನನ್ನ ಕೋರಿಕೆಯ ಪ್ರಕಾರವೇ ನನ್ನ ಗಂಡ ತವರು ಮನೆಗೆ ತಂದು ಬಿಟ್ಟಿರುತ್ತಾನೆಂದರೆ ಸರಿ. ಆ ದಿವಸ ಎದುರುದಾರನ ಜೊತೆ ಜಗಳ ಆಗಿರುವುದಿಲ್ಲ. ನಾನು ನನ್ನ ಸ್ವಇಚ್ಚೆಯ ಮೇರೆಗೆ ತವರು ಮನೆಗೆ ಬಂದಿದ್ದು ಯಾವುದೇ ಸಹ ಕಾರಣ ಇಲ್ಲದೇ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದು ಎದುರುದಾರನ ಮನೆಗೆ ಬರಲು ನಿರಾಕರಿಸಿರುತ್ತೇನೆಂದರೆ ಸರಿಯಲ್ಲ. ಜೀವಾನಂಶ ಪಡೆಯಲು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ನನ್ನ ಮದುವೆಯಾದ ತರುವಾಯ ನನ್ನ ಗಂಡನ ಮನೆಯಲ್ಲಿ ಜಗಳ ಮಾಡಲು ಪ್ರಾರಂಭಿಸಿದ್ದೆ ಎಂದರೆ ಸರಿಯಲ್ಲ ಮತ್ತು ಅವರ ಜೊತೆ ವಿಚಿತ್ರವಾಗಿ ವರ್ತನೆ ಮಾಡಲು ಪ್ರಾರಂಭಿಸಿದ್ದೆ ಎಂದರೆ ಸರಿಯಲ್ಲ. ಕಾರಣವಿಲ್ಲದೇ ಆಳುವುದು ಕೋಪ ಮಾಡಿಕೊಳ್ಳುವುದು ಮತ್ತು ಮಾನಸಿಕ ಕಿನ್ನತೆಯಿಂದ ಬಳಲುತ್ತಿದ್ದೆ ಎಂದರೆ ಸರಿಯಲ್ಲ ಮತ್ತು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿದೆ ಎಂದರೆ ಸಾಕ್ಷಿ ಒಂದು ಬಾರಿ ಪ್ರಯತ್ನ ಪಟ್ಟಿದ್ದೆ ಸಾಕ್ಷಿ ಮುಂದುವರೆದು ಎದುರುದಾರ ನೀಡಿದ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿದೆ ಎಂದು ಉತ್ತರಿಸಿರುತ್ತಾರೆ . ನಾನು ಎದುರುದಾರನ ಮನೆಯಲ್ಲಿ ಇರುವಾಗ ನನ್ನ ಬಳಿ ಮೊಬೈಲ್ ಇತ್ತು.

ನ್ಯಾಯಾಲಯದ ಸಮಯ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲವನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ